ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ಮೈಸೂರಿನಿಂದ ದಾವಣಗೆರೆಗೆ, ದಾವಣಗೆರೆಯಿಂದ ಬೆಂಗಳೂರಿಗೆ ಸ್ಥಳಾಂತರಿಸಿರುವ ಔಚಿತ್ಯದ ಬಗ್ಗೆ.

1622 (1619) : ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

(ಅ) ರಾಜ್ಯ ಪರಿಶಿಷ್ಟ ಪಂಗಡ ಕಲ್ಯಾಣ ನಿರ್ದೇಶನಾಲಯವನ್ನು ಮೈಸೂರಿನಿಂದ ದಾವಣಗೆರೆ, ದಾವಣಗೆರೆಯಿಂದ - ಬೆಂಗಳೂರಿಗೆ ಹೀಗೆ ಮೂರು ವರ್ಷಗಳಲ್ಲಿ ಮೂರು ಕಡೆ ಬದಲಾಯಿಸಲು ಕಾರಣವೇನು;

(ಆ) ರಾಜ್ಯ ಪರಿಶಿಷ್ಟ ಪಂಗಡದ ನಿರ್ದೇಶನಾಲಯ ಪ್ರಾರಂಭವಾದಾಗಿನಿಂದ ಇದುವರೆಗೆ ವರ್ಷಾವಾರು ಬಿಡುಗಡೆಯಾದ ಅನುದಾನ ವೆಚ್ಚವಾದ ಹಣ ಹಾಗೂ ಪ್ರಯೋಜನ ಪಡೆದ ಫಲಾನುಭವಿಗಳೆಷ್ಟು;

(ಇ) ನಿರುಪಯುಕ್ತವಾಗಿರುವ ಪರಿಶಿಷ್ಟ ಪಂಗಡ ಕಲ್ಯಾಣ ನಿರ್ದೇಶನಾಲಯವನ್ನು ರದ್ದುಪಡಿಸಿ ಪರಿಶಿಷ್ಟ ನಿಗಮ ಸ್ಥಾಪನೆಯ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಸರ್ಕಾರವು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರಾಜ್ಯದಲ್ಲಿ ಪ್ರತ್ಯೇಕವಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ಮೈಸೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಸದರಿ ನಿರ್ದೇಶನಾಲಯವನ್ನು ಮೈಸೂರಿನಲ್ಲಿ ಪ್ರಾರಂಭಿಸದೇ ಇರುವುದರಿಂದ ರಾಜ್ಯದಲ್ಲಿರುವ ಎಲ್ಲಾ ಪರಿಶಿಷ್ಟ ವರ್ಗದ ಜನಾಂಗದವರಿಗೆ ಅನುಕೂಲವಾಗುವಂತೆ ಪರಿಶಿಷ್ಟ ವರ್ಗದ ನಿರ್ದೇಶನಾಲಯದ ಕೇಂದ್ರ ಸ್ಥಾನವನ್ನು ಮೈಸೂರಿನಿಂದ ದಾವಣಗೆರೆ ಸ್ಥಳಾಂತರಿಸಿದೆ. ಈ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಕೇಂದ್ರ ಕಛೇರಿಯನ್ನು ದಾವಣಗೆರೆಯಲ್ಲಿ ದಿನಾಂಕ 7-1-99 ರಿಂದ ಪ್ರಾರಂಭಿಸಿ ಕಾರ್ಯಾರಂಭವನ್ನು ಮಾಡಿರುತ್ತದೆ. ನಂತರ ಪರಿಶಿಷ್ಟ ವರ್ಗಗಳ ಕಲ್ಯಾಣ ಕೇಂದ್ರ ಕಛೇರಿಯನ್ನು ದಾವಣಗೆರೆಯಿಂದ ಬೆಂಗಳೂರಿಗೆ ಈ ಕೆಳಕಂಡ ಕಾರಣಗಳಿಂದ ಸ್ಥಳಾಂತರಿಸಲಾಗಿದೆ.

1. ಸುಮಾರು 38 ಅಭಿವೃದ್ಧಿ ಇಲಾಖೆಗಳು ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ. ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವು ಈ ಕಾರ್ಯಕ್ರಮಗಳ ಪ್ರಗತಿಯನ್ನು ಆಗಿಂದಾಗ್ಗೆ ಪರಿಶೀಲಿಸಬೇಕಾಗುತ್ತದೆ. ಅಲ್ಲದೆ ಸಂಬಂಧಪಟ್ಟ ಇಲಾಖೆಗಳಿಂದ ಎಂ. ಎಸ್. ಆರ್., ಕೆ. ಡಿ. ಪಿ. ಸಭೆಗಳಿಗೆ ಅಗತ್ಯವಿರುವ ಮಾಹಿತಿಗಳನ್ನು ಕಾಲಕಾಲಕ್ಕೆ ತರಿಸಬೇಕಾಗುತ್ತದೆ. ಹಾಗೂ ಈ ಎಲ್ಲಾ ಇಲಾಖೆಗಳ ಕೇಂದ್ರ ಕಛೇರಿಗಳು ಬೆಂಗಳೂರಿನಲ್ಲಿಯೇ ಇರುವ ಪ್ರಯುಕ್ತ ಸಕಾಲದಲ್ಲಿ ಮಾಹಿತಿಗಳನ್ನು ತರಿಸುವಲ್ಲಿ ತೊಂದರೆಯಾಗುತ್ತದೆ.

2. ಈ ಇಲಾಖೆಯ ಅಧಿಕಾರಿಗಳು ಪ್ರತಿ ತಿಂಗಳು ಹಲವಾರು ಸಭೆಗಳಿಗೆ ಹಾಜರಾಗಬೇಕಾಗುತ್ತದೆ. ಹಾಗೂ ವಿವಿಧ ಇಲಾಖಾ ಕಾರ್ಯದರ್ಶಿಗಳು ಏರ್ಪಡಿಸುವ ಎಂ. ಎಂ. ಆರ್. ಸಭೆಗಳಿಗೆ ಹಾಜರಾಗಬೇಕಾಗುತ್ತದೆ. ಇದರ ಕೇಂದ್ರ ಕಛೇರಿಯು ದಾವಣಗೆರೆಯಲ್ಲಿರುವ ಪ್ರಯುಕ್ತ ಇಂತಹ ಸಬೆಗಳಿಗೆ ಹಾಜರಾಗಲು ತೊಂದರೆಯಾಗುತ್ತದೆ.

3. ಈ ಇಲಾಖೆಯ ಅಧಿಕಾರಿಗಳು ಒಂದಲ್ಲಾ ಒಂದು ಸಭೆಗೆ ಹಾಜರಾಗುವ ಸಂಬಂಧ ಕನಿಷ್ಠ 3-4 ಬಾರಿ, ಪ್ರತಿ ತಿಂಗಳು ಬೆಂಗಳೂರಿಗೆ ಪ್ರವಾಸ ಕೈಗೊಳ್ಳಬೇಕಾಗುತ್ತದೆ. ಇದರಿಂದಾಗಿ ವಿನಾಕಾರಣ ಇಲಾಖೆಯ ಅಧಿಕಾರಿಗಳಿಗೆ ಪ್ರವಾಸಭತ್ಯೆ ನೀಡುವ ಪರಿಸ್ಥಿತಿ ಇದೆ.

4. ಈ ರೀತಿ ಪದೇ ಪದೇ ಅಧಿಕಾರಿ ನೌಕರರು ಪ್ರವಾಸ ಕೈಗೊಳ್ಳಬೇಕಾಗಿರುವ ಪ್ರಯುಕ್ತ ದಿನನಿತ್ಯದ ಕೆಲಸಕಾರ್ಯಗಳಲ್ಲಿ ಅಡಚಣೆ ಉಂಟಾಗಿದೆ.

5. ವಿಧಾನಮಂಡಲದ ಅಧಿವೇಶನದ ಸಮಯದಲ್ಲಿ ಅಗತ್ಯ ಮಾಹಿತಿಗಳನ್ನು ಒದಗಿಸುವ ಸಲುವಾಗಿ ಇಲಾಖೆಯ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಳು ಬೆಂಗಳೂರಿನಲ್ಲಿಯೇ ಇರಬೇಕಾಗುತ್ತದೆ. ಮತ್ತು ವಿಧಾನಮಂಡಲಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ಪರಿಶಿಷ್ಟ ಜಾತಿ : ವರ್ಗದವರ ಬಗ್ಗೆ ಮಾಹಿತಿಯನ್ನು ಕ್ರೋಢೀಕರಿಸಿ ಒದಗಿಸಬೇಕಾಗಿರುವ ಪ್ರಯುಕ್ತ ಈ ಅಧಿಕಾರಿಗಳು ಸಮಾಜ ಕಲ್ಯಾಣ ಇಲಾಖಾ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮಾಹಿತಿಗಳನ್ನು ನೀಡಬೇಕಾಗುತ್ತದೆ. ಇದರಿಂದಾಗಿ ಈ ಎರಡು ಇಲಾಖೆಗಳು ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುವುದು ಸೂಕ್ತವಾಗುವುದು

6. ಬಹುತೇಕ ಪರಿಶಿಷ್ಟ ವರ್ಗದವರಿಗೆ ಮತ್ತು ವರ್ಗದವರ ವಿಷಯಗಳಲ್ಲಿ ಆಸಕ್ತಿ ಹೊಂದಿರುವ ಇತರ ಸಾಮಾನ್ಯ ಜನರಿಗೆ ದಾವಣಗೆರೆಗಿಂತ ಬೆಂಗಳೂರು ಹೆಚ್ಚಿನ ಅನುಕೂಲವಾಗುವುದು.

		1998-99ನೇ ಸಾಲಿನಲ್ಲಿ ನಿಗದಿಪಡಿಸಿದ ಮೊತ್ತ (ರೂ. ಲಕ್ಷಗಳಲ್ಲಿ)	1999-2000ನೇ ಸಾಲಿನಲ್ಲಿ ನಿಗದಿಪಡಿಸಿದ ಮೊತ್ತ(ರೂ. ಲಕ್ಷಗಳಲ್ಲಿ)
ಬಿಡುಗಡೆಯಾದ ಅನುದಾನ	-	7618.15	8792.71
ವೆಚ್ಚವಾದ ಹಣ	-	6956.98	3370.77 (31-1-2000)
ಪ್ರಯೋಜನ ಪಡೆದ ಫಲಾನುಭವಿಗಳು	-	32865	18412 (31-1-2000)

(ಇ) ಇಲ್ಲ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿ ಮೇಲ್ವಿಚಾರಕ ನೌಕರರಿಗೆ ಆಗಿರುವ ವೇತನ ತಾರತಮ್ಯ

1623 (1915) : ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿನ ಮೇಲ್ವಿಚಾರಕರಾಗಿರುವ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕರ ಶ್ರೇಣಿ ವೇತನವನ್ನು ಸಮಾಜಕಲ್ಯಾಣ ಇಲಾಖೆಯಲ್ಲಿನ ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕ ಶ್ರೇಣಿಯ ವೇತನವನ್ನು ನೀಡಲಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಒಂದೇ ಮಾತೃ ಇಲಾಖೆಯ ಒಂದೇ ಸಮಾನ ಹುದ್ದೆಯ ಒಂದೇ ಬಗೆಯ ಕಾರ್ಯ ನಿರ್ವಹಿಸುವ ಇಬ್ಬರು ನೌಕರರಿಗೆ ಎರಡು ಪ್ರತ್ಯೇಕ ಶ್ರೇಣಿಯಲ್ಲಿ ವೇತನ ನೀಡುತ್ತಿರುವುದು ತಾರತಮ್ಯವಲ್ಲವೇ; ಇದನ್ನು ಎಂದು ಸರಿಪಡಿಸುವಿರಿ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಿಗೆ ಪ್ರಥಮ ದರ್ಜೆ ಸಹಾಯಕರ ವೇತನ ಶ್ರೇಣಿ ಪಾವತಿಸುತ್ತಿರುವ ಹಾಗೂ ಹಿಂದುಳಿದ ವರ್ಗಗಳ ವಸತಿ ನಿಲಯಗಳ ಮೇಲ್ವಿಚಾರಕರುಗಳಿಗೆ ಎರಡನೇ ದರ್ಜೆಯ ವೇತನ ಶ್ರೇಣಿ ನೀಡಲಾಗುತ್ತಿದೆ.

(ಆ) ಇದರ ಬಗ್ಗೆ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದ್ದು ಪರಿಶೀಲನೆಯಲ್ಲಿದೆ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿನ ವಾರ್ಷಿಕ ಅನುದಾನವನ್ನು ಹೆಚ್ಚಿಸುವ ಬಗ್ಗೆ.

1624 (1887) : ಶ್ರೀ ಹಸನಸಾಬ್ ನಬೀಸಾಬ್ ಧೋತಿಹಾಳ್ (ಕುಷ್ಟಗಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಒದಗಿಸಲಾಗಿರುವ ವಾರ್ಷಿಕ ಅನುದಾನವೆಷ್ಟು;

(ಆ) ಸದರಿ ಅನುದಾನದ ಪ್ರಮಾಣವನ್ನು ಹೆಚ್ಚಳ ಮಾಡುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆಯೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 2000-2001ನೇ ಸಾಲಿಗೆ ರೂ. 1000.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.